ಶ್ರೀ ಬಿ.ಎಸ್.ಯಡಿಯೂರಪ್ಪ: ಉಪಾಧ್ಯಕ್ಷರೆ, ನೀವು ಒಂದೊಂದೇ ನಿಮಿಷದಲ್ಲಿ ವಿಷಯವನ್ನು ಸರ್ಕಾರಕ್ಕೆ ಹೇಳಬೇಕು ಎನ್ನುತ್ತೀರಿ. ಈಗಾಗಲೇ ನಿಮ್ಮ ಪಟ್ಟಿಯಲ್ಲಿರುವ ವಿಷಯಗಳಲ್ಲಿ ಯಾವುದು ಪ್ರಾಮುಖ್ಯವಾದವುಗಳು ಎಂಬುದನ್ನು ನೀವೇ ತೀರ್ಮಾನ ಮಾಡಿ ಸದಸ್ಯರಿಗೆ ಮಾತನಾಡಲು ಅವಕಾಶ ಮಾಡಿಕೊಡಿ. ಏಕೆಂದರೆ ಒಂದೊಂದೇ ನಿಮಿಷದಲ್ಲಿ ವಿಷಯ ಪ್ರಸ್ತಾಪ ಮಾಡಿ ಎಂದರೆ ಕಷ್ಟವಾಗುತ್ತದೆ. ಕೇವಲ ಸರ್ಕಾರದ ಗಮನಕ್ಕೆ ತರುವುದಕ್ಕೆ ಮಾತ್ರ ಇಲ್ಲಿ ವಿಷಯ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ಈಗಾಗಲೇ ಆರು ತಿಂಗಳು ಕಳೆದುಹೋಗಿರುವ ಘಟನೆಗೆ ಸಂಬಂಧಪಟ್ಟಂತೆ ಪರಿಹಾರವನ್ನು ಕಂಡುಹಿಡಿಯಬೇಕಾಗಿದೆಯಾದ ಕಾರಣ ಮಹತ್ವವನ್ನರಿತು ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು : ನಾನು ಯಾರಿಗೂ ಅವಕಾಶ ಕೊಡುವುದಿಲ್ಲವೆಂದಿಲ್ಲ. ಆದರೆ ಆದಷ್ಟು ಬೇಗ ವಿಷಯವನ್ನು ಹೇಳಲಿ ಎನ್ನುವ ದೃಷ್ಟಿಯಿಂದ ಹೇಳಿದೆ.

## 9. ಅಧ್ಯಕ್ಷರ ಅಪ್ಪಣೆ ಮೇರೆಗೆ

**ವಿಷಯ : ಹುಣಸೂರು ತಾಲ್ಲೂಕಿನ ಹನಗೋಡು ಗ್ರಾಮದಲ್ಲಿ ಕಾಡಾನೆಗಳು ರೈತರ ಜಮೀನುಗಳಿಗೆ ನುಗ್ಗಿ ಫಸಲು ನಾಶಪಡಿಸಿರುವುದು ಹಾಗೂ ಹೊಗೇಸೊಪ್ಪಿಗೆ ಬೆಂಬಲ ಬೆಲೆ ನೀಡುವುದು.**

+ ಶ್ರೀ ಜಿ.ಟಿ.ದೇವೇಗೌಡ (ಹುಣಸೂರು): ಮಾನ್ಯ ಉಪಾಧ್ಯಕ್ಷರೆ, ದಿನಾಂಕ 31-10-1998ರಂದು ಹುಣಸೂರು ತಾಲ್ಲೂಕಿನ ಹನಗೋಡು ಹೋಬಳಿಯಲ್ಲಿ ರೈತರ ಜಮೀನುಗಳಿಗೆ ಕಾಡಾನೆಗಳು ನುಗ್ಗಿ ರೈತರ ಫಸಲನ್ನು ನಾಶಪಡಿಸಿರುವುದರಿಂದ ಅಲ್ಲಿ ಲಕ್ಷಾಂತರ ರೂ.ಗಳ ಹಾನಿಯಾಗಿದೆ. ಈ ಬಗ್ಗೆ ಮೈಸೂರಿನ 'ಆಂದೋಲನ' ಪತ್ರಿಕೆಯವರು ಮತ್ತು 'ಸಂಯುಕ್ತ ಕರ್ನಾಟಕ' ಪತ್ರಿಕೆಯವರು ದಿನಾಂಕ 01-11-98ರಂದು ಫೋಟೋ ಸಮೇತ ವರದಿಯನ್ನು ಪ್ರಕಟಿಸಿದ್ದಾರೆ. ಸುಮಾರು ಒಂದು ದಿವಸದ ಕಾಲ ಅಲ್ಲಿನ ರೈತರು ಆನೆಗಳ ಜೊತೆ ಸಮರವನ್ನೇ ನಡೆಸಿದ್ದಾರೆ. ಒಂದು ಆನೆಯ ಮರಿಯನ್ನು ಕೂಡ ಹಿಡಿದಿದ್ದಾರೆ. ಇದರ ಬಗ್ಗೆ ಫೋಟೋ ಕೂಡ ತೆಗೆದಿದ್ದಾರೆ. ಈ ರೀತಿಯಲ್ಲಿ ಸತತವಾಗಿ ಆನೆಗಳು ರೈತರ ಜಮೀನುಗಳಿಗೆ ನುಗ್ಗಿ ದಾಂಧಲೆ ಮಾಡುತ್ತಿದ್ದರೂ ಕೂಡ ಆನೆಗಳು ಬರದ ಹಾಗೆ ಮಾಡಲು 'ಸೋಲಾರ್ ತಂತಿ'ಯನ್ನು ಹಾಕತಕ್ಕಂಥ ವ್ಯವಸ್ಥೆಯನ್ನು ಸ್ಥಳೀಯ ಅಧಿಕಾರಿಗಳು ಮಾಡಿರುವುದಿಲ್ಲ. ಆ ಅಧಿಕಾರಿಗಳು ಅಲ್ಲಿಗೆ ಬಂದು ನೋಡುವ ಕೆಲಸವನ್ನೂ ಕೂಡ ಮಾಡಿಲ್ಲ. ಇದಲ್ಲದೆ ಕಳೆದ ಎರಡು ವರ್ಷಗಳಲ್ಲಿ ಬೆಳೆ ನಷ್ಟವಾಗಿರುವುದಕ್ಕೆ ಸಂಬಂಧಪಟ್ಟಂತೆ ಏನು ಪರಿಹಾರ ಧನವನ್ನು ಕೊಡಬೇಕಾಗಿತ್ತೋ ಅದನ್ನೂ ಕೂಡ ಇನ್ನೂ ಕೊಟ್ಟಿಲ್ಲದಿರುವ

ವಿಷಯವನ್ನು ಸರ್ಕಾರಕ್ಕೆ ತಮ್ಮ ಮೂಲಕ ತಿಳಿಸುತ್ತಿದ್ದೇನೆ. ಇಂದು ಕಾಡಾನೆಗಳನ್ನು ಓಡಿಸುವುದಕ್ಕೋಸ್ಕರ ಅಲ್ಲಿನ ಸುಮಾರು 1ರಿಂದ 2 ಸಾವಿರ ಜನರು ರಾತ್ರಿ ನಿದ್ದೆಯನ್ನು ಕೂಡ ಮಾಡದೆ ರೈತರ ಜಮೀನುಗಳನ್ನು ಕಾಯುತ್ತಾ ಪಟಾಕಿಗಳನ್ನು ಸಿಡಿಸುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಕೂಡಲೇ ಗಮನಹರಿಸಿ ಕಾಡಾನೆಗಳನ್ನು ರೈತರ ಜಮೀನಿನಿಂದ ಓಡಿಸುವ ಕೆಲಸಕ್ಕೆ ಚಾಲನೆ ಕೊಟ್ಟು ಕಾರ್ಯಪ್ರವೃತ್ತರಾಗಬೇಕು. ಇನ್ನು ಇತ್ತೀಚಿನ ದಿನಗಳಲ್ಲಿ ರೈತರು ಬೆಳೆದ ಹೊಗೆಸೊಪ್ಪಿಗೆ ಸರಿಯಾದ ಬೆಲೆ ಸಿಗುತ್ತಿಲ್ಲವಾದ್ದರಿಂದ ಸುಮಾರು ಒಂದೂವರೆ ಲಕ್ಷ ಜನ ರೈತರು ಕಂಗಾಲಾಗಿದ್ದಾರೆ. ಇವೊತ್ತು ಹುಣಸೂರಿನ 35 ಸಾವಿರ ಎಕರೆಯಲ್ಲಿ ಪಿರಿಯಾಪಟ್ಟಣದ 70 ಸಾವಿರ ಎಕರೆಯಲ್ಲಿ, ಕೆ.ಆರ್.ನಗರದಲ್ಲಿ 25 ಸಾವಿರ ಎಕರೆಯಲ್ಲಿ ಹಾಗೂ ಹೆಗ್ಗಡದೇವನಕೋಟೆಯ ಸುಮಾರು 15 ರಿಂದ 20 ಸಾವಿರ ಎಕರೆ ಪ್ರದೇಶದಲ್ಲಿ ರೈತರು ಹೊಗೆಸೊಪ್ಪನ್ನು ಬೆಳೆಯುತ್ತಿದ್ದಾರೆ. ಒಂದು ಕೆ.ಜಿ. ಹೊಗೆಸೊಪ್ಪನ್ನು ಬೆಳೆಯಲು ರೈತನಿಗೆ ಸುಮಾರು 30 ರಿಂದ 40 ರೂ.ಗಳು ಖರ್ಚಾಗುತ್ತಿದೆ. ಆದರೆ ಒಂದು ಕೆ.ಜಿ. ಹೊಗೆಸೊಪ್ಪಿಗೆ ರೈತರಿಗೆ 10 ರೂ.ಗಳಿಂತ 15 ರೂ.ಬೆಲೆ ಮಾತ್ರ ಸಿಗುತ್ತಿದೆ. ಪ್ರಥಮ ದರ್ಜೆ ಹೊಗೆಸೊಪ್ಪಿಗೆ ಒಂದು ಕೆ.ಜಿ.ಗೆ 100ರೂ. ಇದ್ದದ್ದು ಇಂದು 40 ರಿಂದ 50 ರೂ.ಗಳಿಗೆ ಬಂದಿದೆ. ಕಡೆಯ ದರ್ಜೆಯ ಹೊಗೆಸೊಪ್ಪಿಗೆ ಈ ಹಿಂದೆ ಒಂದು ಕೆ.ಜಿ.ಗೆ 30 ರಿಂದ 40 ರೂ.ಗಳು ಸಿಗುತ್ತಿತ್ತು, ಆದರೆ ಈಗ 6 ರಿಂದ 10 ರೂ.ಗಳಿಗೆ ಬೆಲೆ ಬಂದು ನಿಂತಿದೆ. ಮಾನ್ಯ ಯಡಿಯೂರಪ್ಪನವರು ಹುಣಸೂರಿಗೆ ಬಂದಿದ್ದಾಗ ನಮ್ಮ ರೈತರು ಹೊಗೆಸೊಪ್ಪಿನ ಬೆಲೆ ಇಳಿದಿರುವುದಕ್ಕೆ ಸಂಬಂಧಪಟ್ಟಂತೆ ಮನವಿಯನ್ನು ಕೊಟ್ಟರು. ಅವರಿಗೂ ಈ ವಿಷಯ ಗೊತ್ತಿದೆ. ಈಗಾಗಲೇ ಶಿರಾದಲ್ಲಿ ರೈತರ ಗಲಾಟೆ ನಡೆದಿರುವ ಹಿನ್ನೆಲೆಯಲ್ಲಿಯೇ ನೀವು ಹುಣಸೂರಿನಲ್ಲಿ ಅದೇ ರೀತಿಯ ಗಲಾಟೆ ಆಗಲು ಅವಕಾಶ ಕೊಡಬಾರದು. ಆದುದರಿಂದ ನಮ್ಮ ರಾಜ್ಯ ಸರ್ಕಾರ ಇಂದು ರೈತರ ಪರವಾಗಿ ನಿಲುವನ್ನು ತಳೆಯಬೇಕು. ಇವೊತ್ತು ಕೇಂದ್ರ ಸರ್ಕಾರ ಯಾವುದೇ ಬೆಳೆಗಳ ಬಗ್ಗೆ ಗಮನ ಹರಿಸುತ್ತಿಲ್ಲ. ಇಂದಿನ ಹೊಗೆಸೊಪ್ಪಿನ, ರೇಷ್ಮೆಯ ಮತ್ತು ಹತ್ತಿಯ ಬೆಲೆಗಳು ಇಳಿದಿರುವುದರಿಂದ ರೈತರುಗಳು ಕುಸಿದುಬಿದ್ದು ಸಾಯುತ್ತಿದ್ದಾರೆ. ಆದುದರಿಂದ ರೈತರ ಹೆಸರನ್ನು ಹೇಳಿಕೊಂಡು ಗೆದ್ದುಬಂದಿರುವ ನಮ್ಮ ರಾಜ್ಯಸರ್ಕಾರ ರೈತರಿಗೆ ಬೆಂಬಲ ಬೆಲೆಯನ್ನು ಕೊಟ್ಟು ಆಮೂಲಕ ರೈತರ ಪರವಾಗಿ ನಿಲುವನ್ನು ತಳೆಯಬೇಕು. ರೈತರ ಪರವಾಗಿ ಕೇಂದ್ರ ಸರ್ಕಾರ ಕೆಲಸ ಮಾಡುತ್ತಿಲ್ಲ. ಶಿರಾದಲ್ಲಿ ಗಲಾಟೆ ಆದುದಕ್ಕೆ ತನಿಖೆ ಮಾಡಲು ಸದನ ಸಮಿತಿಯನ್ನು ನೇಮಕ ಮಾಡಲಾಗಿದೆ. ಶಿರಾದಲ್ಲಿ ಆದ ರೀತಿಯಲ್ಲಿ ಹುಣಸೂರಿನಲ್ಲಿ ಗಲಾಟೆಯಾಗಬಾರದು ಎನ್ನುವ ದೃಷ್ಟಿಯಿಂದ ನಾನು ಇಂದೇ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಆದುದರಿಂದ ರಾಜ್ಯ ಸರ್ಕಾರ ರೈತರ ಪರವಾಗಿ ನಿಲ್ಲಬೇಕು. ರೈತರಿಗೆ ರಕ್ಷಣೆಯನ್ನು ಕೊಡುವ ಕೆಲಸವನ್ನು ಮತ್ತು ಅವರ ಬೆಳೆಗೆ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರ ಕೊಡದಿದ್ದರೆ ಅವರು ** ಎನ್ನುವ

** ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ವಿಚಾರವನ್ನು ತಮ್ಮ ಮೂಲಕ ಸದನಕ್ಕೆ ತಿಳಿಸುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೆ, ಪ್ರಥಮ ದರ್ಜೆಯ ಮತ್ತು ಕಡೆಯ ದರ್ಜೆಯ ಹೊಗೆಸೊಪ್ಪಿಗೆ ಸರಿಯಾದ ಬೆಲೆ ಸಿಗುತ್ತಿಲ್ಲವೆಂದು ದೇವೇಗೌಡರು ಏನು ಹೇಳಿದ್ದಾರೆ ಅದು ಸತ್ಯ ಸಂಗತಿ. ಅದಕ್ಕಾಗಿ ಬೆಂಬಲ ಬೆಲೆಯನ್ನು ಕೊಡಿಸಬೇಕೆಂದು ತಿಳಿಸಲು ಮೈಸೂರು ಮತ್ತು ಶಿವಮೊಗ್ಗದ ಲೋಕಸಭಾ ಸದಸ್ಯರು ಮೂರು ದಿವಸಗಳ ಹಿಂದೆ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಭೇಟಿ ಮಾಡಿದ್ದಾರೆ. ವಿಷಯ ಈ ರೀತಿ ಇರುವಾಗ ಜಿ.ಟಿ.ದೇವೇಗೌಡರು ವಿಧಾನ ಸಭೆಯಲ್ಲಿ ಕೇಂದ್ರ ಸರ್ಕಾರ ರಾಜೀನಾಮೆ ಕೊಡಬೇಕು ಎಂದು ಅರ್ಥವಿಲ್ಲದೆ ಹೇಳುತ್ತಿದ್ದಾರೆ. ಇಂಥ ಸಂಬಂಧವಿಲ್ಲದ ವಿಷಯ ದಾಖಲೆಗೆ ಹೋಗಲು ನೀವು ಅವಕಾಶ ಕೊಡುತ್ತಿದ್ದೀರಿ.

ಉಪಾಧ್ಯಕ್ಷರು: ಅದು ದಾಖಲೆಗೆ ಹೋಗಬಾರದು. ಮೊದಲೇ ನಾನು ಅವರಿಗೆ ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಿ ಎಂದು ಹೇಳಿದೆ.

ಶ್ರೀ ಆರಗ ಜ್ಞಾನೇಂದ್ರ: ಉಪಾಧ್ಯಕ್ಷರೆ, ಇವರಿಗೆ ಕೇಂದ್ರ ಸರ್ಕಾರವನ್ನು ಟೀಕೆ ಮಾಡುವುದೇ ಕೆಲಸವಾಗಿದೆ. ಈ ರೀತಿಯ ಕೆಟ್ಟ ಚಟವನ್ನು ಬೆಳೆಸಿಕೊಂಡಿದ್ದಾರೆ. ಇವರಿಗೆ ಸಮಸ್ಯೆ ಬಗೆಹರಿಯಬೇಕೋ ಅಥವಾ ಕೇವಲ ಟೀಕೆಯನ್ನೇ ಇವರು ಮಾಡುತ್ತಾರೋ ಎಂಬುದನ್ನು ನೀವೇ ಕೇಳಿ. ರೈತರ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕಾಗಿರುವುದು ಮಾತ್ರ ಮುಖ್ಯವೆಂಬುದನ್ನು ಅವರು ತಿಳಿದುಕೊಳ್ಳಲಿ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಜಿ.ಟಿ.ದೇವೇಗೌಡರು ವಿಧಾನ ಸಭೆಯ ಸದನದಲ್ಲಿ ಎದ್ದುನಿಂತು ಕೇಂದ್ರ ಸರ್ಕಾರ ರಾಜೀನಾಮೆ ಕೊಡಬೇಕು ಎಂದು ಹೇಳುತ್ತಿದ್ದಾರೆ. ಇದರಲ್ಲಿ ನಿಜವಾಗಿಯೂ ಏನಾದರೂ ಅರ್ಥವಿದೆಯೆ?

ಶ್ರೀ ಬಿ.ಬಿ.ಶಿವಪ್ಪ: ಜಿ.ಟಿ.ದೇವೇಗೌಡರನ್ನು ವಿಧಾನ ಸಭೆಯಿಂದ ಮೈಸೂರು ಜಿಲ್ಲಾ ಪಂಚಾಯತಿಗೆ ಕಳುಹಿಸಿದರೆ ಒಳ್ಳೆಯದು. ಏಕೆಂದರೆ ಅವರು ವಿಧಾನ ಸಭೆಯನ್ನು ಜಿಲ್ಲಾ ಪಂಚಾಯತ್ ಸಭೆ ಎಂದು ತಿಳಿದುಕೊಂಡಿರುವ ಹಾಗಿದೆ.

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಜಿ.ಟಿ.ದೇವೇಗೌಡರು ಮಾತನಾಡಿ ಹುಣಸೂರಿನ ಹನಗೋಡು ಗ್ರಾಮದಲ್ಲಿ ರೈತರ ಜಮೀನುಗಳಿಗೆ ಕಾಡಾನೆಗಳು ನುಗ್ಗಿ ರೈತರ ಬೆಳೆಯನ್ನು ನಾಶಮಾಡಿವೆ ಎಂಬುದಾಗಿ ಹೇಳಿದ್ದಾರೆ. ಆ ವಿಚಾರ ನನ್ನ ಗಮನಕ್ಕೂ ಬಂದಿದೆ. ಯಾವ ಪ್ರಮಾಣದಲ್ಲಿ ನಷ್ಟವಾಗಿದೆ ಎಂಬ ಬಗ್ಗೆ ನಮ್ಮ ಅಧಿಕಾರಿಗಳ ಕಡೆಯಿಂದ ಮಾಹಿತಿಯನ್ನು ತರಿಸುತ್ತೇನೆ. ನಾವೂ ಕೂಡ ಈಗಾಗಲೇ ಟ್ರೆಂಚ್‌ನ್ನು

ಹೊಡೆಸುತ್ತಿದ್ದೇವೆ. ಮಾನ್ಯ ಸದಸ್ಯರು 'ಸೋಲಾರ್ ತಂತಿ'ಯನ್ನು ಹಾಕಿಸಬೇಕೆಂದು ಹೇಳಿದ್ದಾರೆ. ಈಗಾಗಲೇ ಕೆಲವು ಕಡೆಯಲ್ಲಿ 'ಸೋಲಾರ್ ತಂತಿ' ಯನ್ನು ಹಾಕಿಸಿದ್ದೆವು. ಆದರೆ ಜನಗಳು ಅದನ್ನು ಕಟ್ ಮಾಡಿ ದನಗಳನ್ನು ಬಿಡುತ್ತಿದ್ದಾರೆ. ಅದಕ್ಕೋಸ್ಕರ ಟ್ರೆಂಚ್ ಹಾಕಿಸಬೇಕು, ಇದಕ್ಕೆ ಹೆಚ್ಚು ಖರ್ಚಾಗುತ್ತದೆ. ಆದರೂ ಕೂಡ ಈಗಾಗಲೇ 256 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ. ಈಗ ಎಲ್ಲಿ ಆನೆಗಳ ಹಾವಳಿ ಜಾಸ್ತಿ ಇದೆಯೋ ಅಲ್ಲಿ ಟ್ರೆಂಚ್ ಹೊಡೆಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಇದರ ಜೊತೆಗೆ ಸೋಲಾರ್ ತಂತಿಯನ್ನು ಹಾಕಬೇಕು. ರೈತರುಗಳೇ ಸ್ವತಃ ಸೋಲಾರ್ ತಂತಿಯನ್ನು ಹಾಕಿಸಿಕೊಂಡರೆ ಅದಕ್ಕೆ ಸಬ್ಸಿಡಿ ಕೊಡುವ ಬಗ್ಗೆ ಯೋಚನೆಯನ್ನು ಮಾಡಲಾಗುವುದು. ಒಟ್ಟಿನಲ್ಲಿ ಆನೆಗಳ ಹಾವಳಿಯನ್ನು ನಿಯಂತ್ರಣ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ.

**(ಆ) ಘಟಪ್ರಭಾ ಸಕ್ಕರೆ ಕಾರ್ಖಾನೆಯಲ್ಲಿ ಆದಂಥ ವ್ಯವಹಾರಗಳು.**

ಶ್ರೀ ವಿ.ಎಸ್.ಕೌಜಲಗಿ (ಅರೆಭಾವಿ): ಮಾನ್ಯ ಉಪಾಧ್ಯಕ್ಷರೆ, ಘಟಪ್ರಭಾ ಸಕ್ಕರೆ ಕಾರ್ಖಾನೆಯಲ್ಲಿ ಆಗಿರುವಂಥ ವ್ಯವಹಾರಗಳ ಬಗ್ಗೆ ಸಕ್ಕರೆ ಮಂತ್ರಿಗಳಿಗೆ ಉತ್ತರಿಸಲು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಘಟಪ್ರಭಾ ಸಹಕಾರ ಸಕ್ಕರೆ ಕಂಪನಿಯ ಆಡಳಿತ ಮಂಡಳಿಯು ಕಾರ್ಖಾನೆಯಲ್ಲಿ ಕಬ್ಬನ್ನು ಅರೆಯುವ ಸಾಮರ್ಥ್ಯವನ್ನು 1250 ಡಿ.ಸಿ.ಯಿಂದ 3500 ಡಿ.ಸಿ.ಗೆ ವಿಸ್ತರಿಸಲು 1991ರಲ್ಲಿ ತೀರ್ಮಾನವನ್ನು ತೆಗೆದುಕೊಂಡಿತು. ತದನಂತರ ಕೇಂದ್ರ ಸರ್ಕಾರ 11-7-96 ರಂದು ಸದರಿ ಸಾಮರ್ಥ್ಯದ ವಿಸ್ತರಣೆಗಾಗಿ ಅನುಮತಿ ಪತ್ರವನ್ನು ನೀಡಿರುತ್ತದೆ. ಇದಕ್ಕೆ ತಗಲುವ ಅಂದಾಜು ವೆಚ್ಚ 45 ಸಾವಿರ ಲಕ್ಷಗಳಾಗಿರುತ್ತದೆ. ಈ ವೆಚ್ಚವನ್ನು ಈ ಕೆಳಕಂಡಂತೆ ಭರಿಸಲು ಉದ್ದೇಶಿಸಲಾಗಿತ್ತು. ಎಸ್.ಸಿ.ಡಿ.ಸಿಯಿಂದ 2,490 ಲಕ್ಷಗಳು, ಹೆಚ್.ಡಿ.ಎಫ್.ನಿಂದ 1,090 ಲಕ್ಷಗಳು, ಕಾರ್ಖಾನೆಯ ಸ್ವಂತ ಬಂಡವಾಳದಿಂದ 920 ಲಕ್ಷ ರೂಪಾಯಿಗಳು. ಈ ರೀತಿ 450 ಲಕ್ಷ ರೂಪಾಯಿಗಳನ್ನು ಭರಿಸಲು ತೀರ್ಮಾನವಾಗಿತ್ತು. ಮೇಲ್ಕಂಡ ಯೋಜನೆಯ ವೆಚ್ಚವನ್ನು ಭರಿಸಲು ರಾಜ್ಯ ಸರ್ಕಾರ ತನ್ನ ಪತ್ರದ ಕ್ರಮಾಂಕ ಸಿಎಂಡಬ್ಲ್ಯು 24 ಸಿಯುಎಫ್ 97 ದಿನಾಂಕ 29-3-97ರಲ್ಲಿ ರಾಷ್ಟ್ರೀಯ ಸರದಾರಿ ಅಭಿವೃದ್ಧಿ ನಿಗಮ, ನವದೆಹಲಿ, ಇಲ್ಲಿಗೆ ಪತ್ರ ಬರೆದು ಕಾರ್ಖಾನೆಯು ಕೋರುವ ವೆಚ್ಚವನ್ನು ಮಂಜೂರು ಮಾಡುವಂತೆ ಶಿಫಾರಸ್ಸು ಮಾಡಿದೆ. ಇದಕ್ಕೆ ಉತ್ತರವಾಗಿ, ರಾಷ್ಟ್ರೀಯ ಸರ್ದಾರಿ ಅಭಿವೃದ್ಧಿ ನಿಗಮ, ನವದೆಹಲಿ, ಇವರು ದಿನಾಂಕ 16-12-96ರ ಪತ್ರದಲ್ಲಿ ತಿಳಿಸಿದಂತೆ, ಶುಗರ ಪ್ಲಾಂಟನ್ನು 15-5-97ರಲ್ಲಿ ಕರ್ನಾಟಕ ಸಹಕಾರ ಅಪೆಕ್ಸ್ ಬ್ಯಾಂಕಿನಿಂದ ಅವಧಿ ಮೀರಿದ ಹಣ 32 ಕೋಟಿ 69 ಲಕ್ಷ ಉಳಿದಿರುವುದನ್ನು ತಿಳಿಸಿ ಈ ಸಕ್ಕರೆ ಕಾರ್ಖಾನೆಯ ಸಾಲದ